೪) ಪ್ರಶ್ನೋತ್ತರ

(ಅ) ಚುಕ್ಕೆಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅನಧಿಕೃತವಾಗಿ ನಿರ್ಮಾಣವಾಗುತ್ತಿರುವ ದೇವಸ್ಥಾನ, ಮಸೀದಿ ಮತ್ತು ಅಂಗಡಿಗಳು.

೩೧೬(೩೭೪೨)

ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧. ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಜಿಲ್ಲಾ ಹೆದ್ದಾರಿಗಳಲ್ಲಿ ಅನಧಿಕೃತವಾಗಿ ನಿರ್ಮಾಣವಾಗಿರುವ ದೇವಸ್ಥಾನಗಳು ಮಸೀದಿಗಳು ಮತ್ತು ಅಂಗಡಿಗಳನ್ನು ತೆಗೆಸಲು ಸರ್ಕಾರ ನಿರ್ದೇಶನ ನೀಡಿದೆಯೆ?

೨. ಈ ಆದೇಶ ಎಂದಿನಿಂದ ಜಾರಿಗೆ ಬಂದಿದೆ?

೩. ಈ ರೀತಿಯ ಎಷ್ಟು ದೇವಸ್ಥಾನಗಳು/ ಮಸೀದಿಗಳು/ ಅಂಗಡಿಗಳನ್ನು ತೆಗೆಸಲಾಗಿದೆ? (ಜಿಲ್ಲಾವಾರು ವಿವರಗಳನ್ನು ನೀಡುವುದು)

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

೧. ಹೌದು. ರಾಷ್ಟ್ರೀಯ ಹೆದ್ದಾರಿಯಲ್ಲಿನ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಲು ಸರ್ಕಾರಿ ಆದೇಶ ಸಂಖ್ಯೆ: ಪಿಡಬ್ಲ್ಯುಡಿ ೩೬೨ ಸಿಆರ್‌ಎಂ ೯೮, ದಿನಾಂಕ:೯.೧೦.೧೯೯೮ರಲ್ಲಿ ನೀಡಿದೆ. ರಾಜ್ಯ ಹೆದ್ದಾರಿಗಳು ಮತ್ತು ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ನಿರ್ಮಾಣವಾಗಿರುವ ದೇವಸ್ಥಾನಗಳು, ಮಸೀದಿಗಳು ಮತ್ತು ಅಂಗಡಿಗಳನ್ನು ತೆಗೆಸಲು ಸರ್ಕಾರ ಇನ್ನೂ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ರಾಷ್ಟ್ರೀಯ ಹೆದ್ದಾರಿ ಕಾಯ್ದೆ-೧೯೫೬ ರಾಷ್ಟ್ರೀಯ ಹೆದ್ದಾರಿಗಳಿಗೆ ಅನ್ವಯವಾಗುತ್ತದೆ. ಕರ್ನಾಟಕ ಹೆದ್ದಾರಿ ನಿಯಮ ೧೯೬೪ ರಾಜ್ಯ ಹೆದ್ದಾರಿ ಜಿಲ್ಲಾ ಮುಖ್ಯ ರಸ್ತೆಗಳಿಗೆ ಅನ್ವಯಿಸುತ್ತದೆ. ಸೆಕ್ಷನ್-೭ರ ಪ್ರಕಾರ ಹೈವೇ ಅಥಾರಿಟಿಯು ರಾಜ್ಯ ಹೆದ್ದಾರಿಗಳ ಗಡಿರೇಖೆ, ಕಟ್ಟಡ ರೇಖೆ ಮತ್ತು ನಿಯಂತ್ರಣ ರೇಖೆಯನ್ನು ಗುರುತಿಸಿ ರಾಜ್ಯ ಪ್ರಪತ್ರದಲ್ಲಿ ಪ್ರಕಟಿಸಿದ್ದಾರೆ. ಇದಕ್ಕೆ ಹಲವಾರು ಆಕ್ಷೇಪಣೆಗಳು ಬಂದಿರುತ್ತದೆ. ಸರ್ಕಾರ ಅಂತರ ಇಲಾಖಾ ಸಮಿತಿಯನ್ನು ಪ್ರಧಾನ ಕಾರ್ಯದರ್ಶಿಗಳು (ಲೋಕೋಪಯೋಗಿ ಇಲಾಖೆ) ನೇತೃತ್ವದಲ್ಲಿ ರಚಿಸಲಾಗಿದೆ. ಈ ಸಮಿತಿಯ ಶಿಫಾರಸ್ಸಿನ ಮೇರೆಗೆ ರಾಜ್ಯ ಹೆದ್ದಾರಿಗಳ

ಗಡಿ ರೇಖೆ, ಕಟ್ಟಡ ರೇಖೆ ಮತ್ತು ನಿಯಂತ್ರಣ ರೇಖೆಗಳ ಬಗ್ಗೆ ಸರ್ಕಾರ ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕಾಗಿರುವುದರಿಂದ ಈ ಕಟ್ಟಡಗಳನ್ನು ಗುರುತಿಸಿ ತೆಗೆಯುವ ಕಾರ್ಯ ಕೈಗೊಳ್ಳಬೇಕಿದೆ.

೨. ಮೇಲಿನ ಆದೇಶ ಹೊರಡಿಸಿದ ದಿನಾಂಕದಿಂದ.

೩. ರಾಷ್ಟ್ರೀಯ ಹೆದ್ದಾರಿಯಲ್ಲಿನ ಏವರಗಳನ್ನು ಲಗತ್ತಿಸಿದೆ. ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆಯಲ್ಲಿ ಅನಧಿಕೃತವಾಗಿ ಇರುವ ದೇವಸ್ಥಾನ, ಮಸೀದಿಗಳು, ಅಂಗಡಿಗಳನ್ನು ಗುರುತಿಸಿ ತೆರವು ಮಾಡಬೇಕಿದೆ.

DISTRICTWISE NH BREAK UP OF REMOVAL OF UNAUTHORISED STRUCTURES ALONG NATIONAL HIGHWAYS IN THE STATE.

	NH4	NH7	NH209	NH207	NH48
Bangalore Urban	300	30	--	--	--
Bangalore Rural	135+4*	30	54+1*	--	--
Kolar	155	90	--	--	--
Mandya	--	--	--	--	71
U.Kannada	--	--	--	--	--
Bellary	--	--	--	--	--
Chitradurga	--	--	--	--	--
Shimoga	--	--	--	--	--
Bijapur	--	--	--	--	--
Koppal	--	--	--	--	--
Haveri	15	--	--	--	--
Dharwar	4	--	--	--	--
Udupi	--	--	--	--	--
Mangalore	--	--	--	--	12
Hassan	--	--	--	--	--
Total	609+4*	150	54+1*	--	83

Note: * Temples removed

NH17	NH63	NH206	NH13	TOTAL
--	--	--	--	330
--	--	--	--	219+5*
--	--	--	--	245
--	--	--	--	71
5	3	6	--	14
--	10	--	10	20
--	--	--	9	9
--	--	10	--	10
--	--	--	68	68
--	--	--	8	8
--	--	--	--	15
--	--	--	--	4
5	--	--	--	5
--	--	--	--	12
--	--	25	--	25
10	13	41	95	1055+5*

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಉತ್ತರ ಬಂದಿದೆ, ಮಾನ್ಯ ಸಚಿವರು ಕೊಟ್ಟರತಕ್ಕಂಥ ಉತ್ತರದಿಂದ ಉದ್ಭವವಾಗಿರುವ ಎರಡು-ಮೂರು ಉಪ ಪ್ರಶ್ನೆಗಳನ್ನು ಕೇಳುತ್ತೇನೆ. ಮೊದಲನೆಯದಾಗಿ, ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೇಳಿಕೆ ಕೊಟ್ಟಿದ್ದಾರೆ. ನಾಳೆ ಮಸೀದಿ, ದೇವಸ್ಥಾನಗಳು ಎಲ್ಲಾ ಒಡೆದು ಹಾಕಿ ಬಿಡಿ ಎಂದು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಇಲ್ಲಿ ನೋಡಿದರೆ ಒಂದೂ ಖಾಲಿಯಾಗಿಲ್ಲವೆಂದು ಹೇಳುತ್ತಿದ್ದಾರೆ. ೧೯೯೮ರಲ್ಲಿ ಇದು ಹೈಕೋರ್ಟ್ ಡೈರೆಕ್ಷನ್ ಪ್ರಕಾರ ಆರ್ಡರ್ ಮಾಡಿರುವಂಥದ್ದು. ಅದು ಆದ ಮೇಲೆ ನಿಮ್ಮ ಸರ್ಕಾರ ಬಂದು ಎರಡು ವರ್ಷಗಳಾದವು. ಇದರ ಮೇಲೆ ನೀವು ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಬೇಕು ಎಂದು ನನ್ನ ಅಭಿಪ್ರಾಯ. ನಮ್ಮಲ್ಲಿ ನ್ಯಾಷನಲ್ ಹೈವೆ ೨೦೭ ಬೆಂಗಳೂರಿನಿಂದ ಕನಕಪುರದವರೆಗೆ ಎಂದು ಮಾಡಿದ್ದೀರಿ. ಬಹಳ ಒಳ್ಳೆಯದು They have been evicted and vacated. ನಾನು ಅಫ್ರೀಷಿಯೇಟ್ ಮಾಡುತ್ತೇನೆ. ಇದೇ ಸಮಯದಲ್ಲಿ ನಿಮ್ಮ ಆ್ಯಕ್ಷನ್ ಸಾಲದು. ನ್ಯಾಷನಲ್ ಹೈವೆ, ಸ್ಟೇಟ್ ಹೈವೆ ಮತ್ತು ಎಮ್‌ಡಿಆರ್‌ಗಳ ನಾರ್ಮ್ಸ್ ಇದೆ. ಆ ನಾರ್ಮ್ಸ್ ಪ್ರಕಾರ ಎಷ್ಟೇ ದೊಡ್ಡ ಕಟ್ಟಡ ಇದ್ದರೂ ಕೂಡ ಅದನ್ನು ತಾವು ಮಾರ್ಕ್ ಮಾಡಿ ಇಮ್ಮೀಡಿಯಟ್ಟಾಗಿ ಡೆಮಾಲಿಷ್ ಮಾಡಬೇಕಾಗುತ್ತದೆ. ಕೇರಳದಲ್ಲಿ ಈ ತರಹದ ಒಂದು ರಾಜ್ಯ ಮಟ್ಟದ ಕಾನೂನು ಮಾಡಿದ್ದಾರೆ. ಈಗ ಕೇರಳದಲ್ಲಿ ಎಲ್ಲಿ ವಿಲೇಜ್ ಇದೆ ಎನ್ನುವುದನ್ನು ಹುಡುಕಲು ಆಗುವುದಿಲ್ಲ ಕೇರಳ ಅಂದರೆ ರಸ್ತೆ ಪಕ್ಕ ಎಂದು ಆಗಿ ಹೋಗಿ ಬಿಟ್ಟಿದೆ. ಆದರೆ ಕರ್ನಾಟಕ ಆ ತರಹ ಆಗತಕ್ಕಂಥದ್ದು ಬೇಡ. ಅದಕ್ಕೋಸ್ಕರ ಒಂದು ವಿಶೇಷವಾದ ಕಾನೂನನ್ನು ತಾವು ಮಾಡಬೇಕು. ಅಪಘಾತಗಳ ಬಗ್ಗೆ ಹೇಳುವುದಾದರೆ, ಕರ್ನಾಟಕದಲ್ಲಿ ಒಂದು ವರ್ಷಕ್ಕೆ ೬೦೦೦ ಜನ ಅಪಘಾತಗಳಲ್ಲಿ ಸಾಯುತ್ತಾರೆ. ಈ ಅಪಘಾತಗಳಲ್ಲಿ ನೋವಾಗಿರತಕ್ಕಂಥವರು ಕಾಲು ಅಥವಾ ಕೈ ಕಳೆದುಕೊಂಡಿರುವವರು, ಅಂಗವಿಕಲರಾಗಿರುವವರು ೬೦,೦೦೦ ಜನ ಇದ್ದಾರೆ. ಆದುದರಿಂದ ಇದಕ್ಕೆ ಹೊಸ ಕಾನೂನು ಮಾಡುವುದಕ್ಕೆ ಸಾಧ್ಯವಾ? ಎರಡನೆಯದಾಗಿ, ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಆದ ಮೇಲೆ ಧಾಬಾಗಳು, ರೆಸಾರ್ಟ್‌ಗಳು ಎಲ್ಲಾ ನ್ಯಾಷನಲ್ ಹೈವೇ ಪಕ್ಕದಲ್ಲಿ ಇವೆ. ಇವುಗಳಿಗೆ ಲೆಕ್ಕವೇ ಇಲ್ಲ ಬೀರ್ ನಿಲ್ಲಿಸಿ ಎಂದು ಮುಖ್ಯ ಮಂತ್ರಿಗಳಿಗೆ ಹೇಳಿದರೆ ಬಾರ್ ಲೈಸನ್ಸ್ ಕೊಡುತ್ತೇವೆ ಎಂದು ಹೇಳುತ್ತಾರೆ. ಹೊಸ ಬಾರ್ ಲೈಸನ್ಸ್ ಪ್ರಕಾರ ಪ್ರಾರಂಭವಾದರೆ ಪಕ್ಕದಲ್ಲಿ ಬಾರ್ ಇದ್ದರೆ ಏನಾಗುತ್ತದೆ? ಎಕ್ಸೈಸ್ ಆ್ಯಕ್ಟ್ ಹೇಗಿದೆ ಎಂದರೆ, ರೋಡ್‌ಗೆ ಫೇಸಿಂಗ್ ಆಗಿ ಬಾಗಿಲು ಹಾಕಿರಬಾರದು ಆವರು ರೋಡ್ ಫೇಸಿಂಗ್ ಆಗಿ ಬಾಗಿಲು ಹಾಕಿಯೇ ಇರುವುದಿಲ್ಲ ಕಿಟಕಿ ಇಟ್ಟಿರುತ್ತಾರೆ. ಪಕ್ಕದಿಂದ ಎಂಟ್ರೆನ್ಸ್ ಕೊಟ್ಟಿರುತ್ತಾರೆ. ಇದರ ಬಗ್ಗೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾ? ತೆಗೆದುಕೊಳ್ಳುವುದಾದರೆ ಯಾವಾಗ ತೆಗೆದುಕೊಳ್ಳುತ್ತೀರಿ? ಮುಖ್ಯ ಮಂತ್ರಿಗಳು ಎಲ್ಲಾ ಆಗಿ ಹೋಗಿದೆ ಎನ್ನುವ

ರೀತಿಯಲ್ಲಿ ಹೇಳಿದ್ದಾರೆ. ಯಾವಾಗಿನಿಂದ ನೀವು ಕಟ್ಟುನಿಟ್ಟಾಗಿ ಜಾರಿಗೆ ತರುತ್ತೀರಿ ಎಂದು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಧರ್ಮ್‌ಸಿಂಗ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯರವರು ಹೇಳಿದ ಹಾಗೆ ವಿಶೇಷವಾಗಿ ಕನಕಪುರದಲ್ಲಿರುವ ಎಲ್ಲಮ್ಮ ಟೆಂಪಲ್ ಬಗ್ಗೆ ಅವರು ಹೇಳಿದ್ದಾರೆ, ಅದನ್ನು ನಾವು ಈಗಾಗಲೇ ತೆಗೆಸಿದ್ದೇವೆ. ನ್ಯಾಷನಲ್ ಹೈವೆ, ಸ್ಟೇಟ್ ಹೈವೆ ಮತ್ತು ಎಮ್‌ಡಿಆರ್ ರೋಡ್ಸ್‌ನಲ್ಲಿರತಕ್ಕಂತಹ ದೇವಸ್ಥಾನಗಳ ಸ್ಥಿತಿ ಏನಿದೆ, ಏನು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೀರಿ, ಮೊದಲು ನಿಮ್ಮದು ಸ್ಟೇಟ್ ಹೈವೆ ಇತ್ತು ಈಗ ನ್ಯಾಷನಲ್ ಹೈವೆ ೨೦೯ ಎಂದು ಆಗಿ ಅದು ಕೇರಳದವರಿಗೆ ಹೋಗುತ್ತದೆ. ನ್ಯಾಷನಲ್ ಹೈವೇಯಲ್ಲಿರತಕ್ಕಂತಹ ಏನೇನು ಎನ್‌ಕ್ರೋಚ್‌ಮೆಂಟ್ ಇದೆ, ಅವೆಲ್ಲಾ ತೆಗೆದುಕೊಳ್ಳಬೇಕೆಂದು ಆಗಿನ ಕಾಲದಲ್ಲಿ ತಾವೂ ಕೂಡ ಮಂತ್ರಿ ಇದ್ದಾಗ ಆದೇಶ ಹೊರಡಿಸಿದರೂ ಕೂಡ ಅದು ಕಾರ್ಯಗತವಾಗುತ್ತಿಲ್ಲ ಎನ್ನತಕ್ಕಂತಹ ಮಾತನ್ನು ಬಹಳ ಒತ್ತಾಯಪೂರ್ವಕವಾಗಿ ಹೇಳಿದ್ದೀರಿ. ಜಸ್ಟೀಸ್ ಠಾಕೂರ್‌ರವರು ರಾಜ್ಯ ಸರ್ಕಾರಕ್ಕೆ ಒಂದು ಆದೇಶ ನೀಡಿದ್ದಾರೆ. ಕೆಲವು ಜನ ಏನಾಗುತ್ತಿದೆ ಕರ್ನಾಟಕ ರಾಜ್ಯದಲ್ಲಿ ಎಂದು ಹೇಳಿ, ಎಷ್ಟು ನ್ಯಾಷನಲ್ ಹೈವೇ ಮೇಲೆ, ರಾಜ್ಯ ಹೆದ್ದಾರಿಗಳ ಮೇಲೆ ಮತ್ತು ಎಲ್‌ಡಿಆರ್ ರಸ್ತೆಗಳ ಮೇಲೆ ಎನ್‌ಕ್ರೋಚ್‌ಮೆಂಟ್ ಆಗಿದೆ ಎನ್ನತಕ್ಕಂಥದ್ದರ ಬಗ್ಗೆ ಸರ್ಕಾರದವರು ಹೈಕೋರ್ಟ್‌ಗೆ ವರದಿ ಕೊಡಬೇಕೆಂದು ಅವರು ಹೇಳಿದರು. ಅದಕ್ಕೆ ನಾವು ಆರು ತಿಂಗಳು ಸಮಯಾವಕಾಶ ತೆಗೆದುಕೊಂಡಿದ್ದೆವು. ಅದನ್ನು ನಾವು ಮಾಡಿ ಮುಗಿಸಿದ್ದೇವೆ. The Executive Engineer is the Authority of the District. ಎಲ್ಲಾ ಕಡೆ ಗೆಜೆಟ್ ನೋಟಿಫಿಕೇಷನ್ ಆಗಿದೆ, ಗೆಜೆಟ್ ನೋಟಿಫಿಕೇಷನ್ ಆದ ಮೇಲೆ ಆರನೇ ತಾರೀಖಿಗೆ ಎನ್‌ಕ್ರೋಚ್‌ಮೆಂಟ್ ಬಗ್ಗೆ ಹೈಕೋರ್ಟ್‌ನಿಂದ ಅಂತಿಮ ನಿರ್ಧಾರ ಬರುತ್ತದೆ. ಇವತ್ತು ಇದರ ಬಗ್ಗೆ ಪ್ರಶ್ನೆ ಕೂಡ ಇದೆ. ವಿಶ್ವಬ್ಯಾಂಕ್ ನೆರವು ಬೇರೆ ಕಡೆಯಿಂದ ತಂದು ಎಲ್ಲಾ ರಾಜ್ಯಗಳಲ್ಲಿ ಕಡ್ಡಾಯವಾಗಿ ಮಾಡುವ ಹಾಗೆ ಸ್ಟೇಟ್ ಹೈವೇ ಮೇಂಟೀನ್ ಮಾಡತಕ್ಕಂತಹ ರೀತಿಯಲ್ಲಿ ಅನ್ ಆಥರೈಸ್ ಕನ್‌ಸ್ಟ್ರಕ್ಷನ್ ಮತ್ತು ಎನ್‌ಕ್ರೋಚ್‌ಮೆಂಟ್ ಬಗ್ಗೆ ಹಾಗೂ ಟೆಂಪಲ್ಸ್ ಬಗ್ಗೆ ಏನಿದೆ, ಅದನ್ನು ನಾವು ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಕೇರಳದಲ್ಲಿ ಮಾಡಿದ್ದಾರೆ, ಬೇರೆ ರಾಜ್ಯಗಳಲ್ಲೂ ಕೂಡ ಮಾಡಿದ್ದಾರೆ. ನಾನು ಸ್ವತಃ ಆಂಧ್ರಪ್ರದೇಶದ ಲೋಕೋಪಯೋಗಿ ಇಲಾಖೆಯ ಮಂತ್ರಿಗಳ ಜೊತೆ ಹಾಗೂ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿ ಹೈದರಾಬಾದಿನಲ್ಲಿ ಮೂರು ದಿವಸಗಳ ಕಾಲ ಚರ್ಚೆ ಮಾಡಿ ಬಂದಿದ್ದೇನೆ. ೧೪೪ ಪುರಸಭೆ, ಮುನಿಸಿಪಾಲಿಟಿ ಕಾರ್ಪೊರೇಷನ್‌ನಲ್ಲಿ ಕೂಡ ಮಾಡಿದ್ದಾರೆ. ಯಾವ ರೀತಿಯಾಗಿ ಕಾಂಪನ್‌ಸೇಷನ್ ಕೊಟ್ಟದೆ, ಕೋರ್ಟ್ ಹೋದರೆ ಕೋರ್ಟ್ ಏನು ತಡೆ ಕೊಟ್ಟದೆ ಎಂದೂ ಕೂಡ ಸಮಗ್ರವಾಗಿ ವಿಚಾ

ಮಾಡಿದೆ. ೧೫೦೦ ಜನ ಆಬ್ಜೆಕ್ಷನ್ ಹಾಕಿದ್ದರು. ಆಬ್ಜೆಕ್ಷನ್ ಸಹ ಹಿರಿಯರಿಂಗ್ ಮಾಡುತ್ತೇವೆ. For that, the Government has constituted an internal department committee with Principal Secretary as the Chairman, Secretary, Urban Development as member. ಅದು ಪ್ರೋಸೆಸ್ ಮಾಡಿ ಸ್ಪಷ್ಟವಾಗಿ ಕಾರ್ಯಾಚರಣೆ ಮಾಡತಕ್ಕಂಥದ್ದು, ಯಾವ ತರಹದ ಅಡತಡೆ ಬಾರದ ಹಾಗೆ ಅದು ಮಾಡಬೇಕೆಂದು ಸರ್ಕಾರ ವಿಚಾರ ಮಾಡುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ತಾವು ಮಾಡುವುದಕ್ಕೆ ಒಪ್ಪಿದ್ದೀರಿ. ನಾವು ಮೆಚ್ಚುತ್ತೇವೆ. In the meanwhile, illegally they are all coming up. ಆಗಸ್ಟ್ ತಾರೀಖಿ ಜಡ್ಜ್‌ಮೆಂಟ್ ಆದ ಮೇಲೆ ಇಂಪ್ಲಿಮೆಂಟ್ ಮಾಡುವುದು ಒಂದು ಭಾಗ. ಅವ್ಯಾಹತವಾಗಿ ಜಾಸ್ತಿಯಾಗುತ್ತಿದೆ ಎಂದು ಹೇಳುವುದರಲ್ಲಿ ನಾನೂ ಒಬ್ಬ ತಕ್ಷಣ ಎಕ್ಸಿಕ್ಯುಟೀವ್ ಇಂಜಿನಿಯರ್‌ಗೆ ರೆಸ್ಪಾನ್ಸಿಬಿಲಿಟಿ ಕೊಟ್ಟು ಹೊಸದಾಗಿ ನಿರ್ಮಾಣಗಳು ಆಗದೆ ಇರುವ ಹಾಗೆ ನೋಡಿಕೊಳ್ಳುವುದಕ್ಕೆ ಸಾಧ್ಯನೇ?

ಶ್ರೀ ಧರ್ಮಸಿಂಗ್: ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ ಮೂರು ದಿವಸಗಳ ಹಿಂದೆನಿಂದ ಪ್ರಯತ್ನ ಮಾಡಿದ್ದೇವೆ. ಎಲ್ಲೆಲ್ಲಿ ಎನ್‌ಕ್ರೋಚ್‌ಮೆಂಟ್ ಆಗಿದೆ ಅದನ್ನು ತೆಗೆಸತಕ್ಕಂತಹ ರೀತಿಯಲ್ಲಿ ಜಿಲ್ಲಾಧಿಕಾರಿಗಳು, ಪೋಲಿಸ್ ಅಧಿಕಾರಿಗಳು ಮತ್ತು ಎಕ್ಸಿಕ್ಯುಟೀವ್ ಇಂಜಿನಿಯರ್ ಎಲ್ಲಾ ಸೇರಿ ಪ್ರಯತ್ನ ಮಾಡುತ್ತಿದ್ದಾರೆ. ಈಗಾಗಲೇ ವಿಧಾನ ಪರಿಷತ್ತಿನಲ್ಲಿ ಶೂನ್ಯ ವೇಳೆಯಲ್ಲಿ ಮಾನ್ಯ ತಂಗಾರವರು ಈ ವಿಚಾರವನ್ನು ಎತ್ತಿದ್ದರು. ಎಲ್ಲಾ ಕೆಲಸ ಪ್ರಾರಂಭ ಮಾಡಿದ್ದೇವೆ. ತಮ್ಮ ತಮ್ಮ ಮನಸ್ಸಿಗೆ ಬರತಕ್ಕಂತಹ ರೀತಿಯಲ್ಲಿ ರಾಜ್ಯದಲ್ಲಿ ಕೂಡ ಪ್ರಾರಂಭ ಮಾಡುತ್ತೇವೆ.

ಶ್ರೀ ಸಿ.ಗುರುಸ್ವಾಮಿ: ಮಾನ್ಯ ಅಧ್ಯಕ್ಷರೆ, ಚಾಮರಾಜ ನಗರ ಮುಖಾಂತರ ೨೦೯ ನ್ಯಾಷನಲ್ ಹೈವೆ ಹೋಗುತ್ತಿದೆ, ದಿನ ಬೆಳಗಾದರೆ ಯಾವುದೇ ಸುದ್ದಿ ಪತ್ರಿಕೆ ನೋಡಿದರೂ ಕೂಡ ಆ್ಯಕ್ಸಿಡೆಂಟ್ ಆಗಿ ೧೦-೧೫ ಜನ ಸತ್ತರು ಎಂದು ಸುದ್ದಿ ನೋಡುತ್ತಿದ್ದೇವೆ. ನ್ಯಾಷನಲ್ ಹೈವೇಯಲ್ಲಿ ಹೋಟಲ್ ಅಂಗಡಿಗಳು ಬರುತ್ತಿರತಕ್ಕಂಥದ್ದು ಇದಕ್ಕೆ ಮುಖ್ಯವಾದ ಕಾರಣ. ಇದರ ಬಗ್ಗೆ ಶೀಘ್ರವೇ ಕ್ರಮ ತೆಗೆದುಕೊಳ್ಳುತ್ತೇವಂದು ಸದನಕ್ಕೆ ಭರವಸೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಎಷ್ಟೋ ಜನರ ಜೀವನ ಹಾಳಾಗುತ್ತಿದೆ. ಪತ್ರಿಕೆಗಳಲ್ಲಿ ಯಾವ ಸುದ್ದಿ ಇರಲಿ, ಇಲ್ಲದ ಇರಲಿ, ಈ ಸುದ್ದಿ ಮಾತ್ರ ಇದ್ದೇ ಇರುತ್ತದೆ. ಇದರ ಬಗ್ಗೆ ಕಮಿಟಿ ಮಾಡಿ ಪ್ರಿನ್ಸಿಪಲ್ ಸೆಕ್ರೆಟರಿ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಸಮಯ ನಿಗದಿ ಮಾಡಿದರೆ ಬಹಳಷ್ಟು ಸಾರ್ವಜನಿಕರಿಗೆ ಒಳ್ಳೆಯದಾಗುತ್ತದೆ ಎಂದು ನನ್ನ ಮನವಿ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಹೊಸ ಹೊಸ ನಿರ್ಮಾಣಗಳು ಬಂದಾಗ ಯಾವ

ಯಾವ ಭಾಗದಲ್ಲಿ ಅಧಿಕಾರಿಗಳಿದ್ದಾರೆ, ಅವರನ್ನು ಜವಾಬ್ದಾರರನ್ನಾಗಿ ಮಾಡಬೇಕಾಗುತ್ತದೆ. ಒಂದು ಕಡೆ ಬರುವುದು ಇನ್ನೊಂದು ಕಡೆ ತೆಗೆಯುವುದು ಆಗಬಾರದು. ತೆಗೆಯುವಾಗ ಎಲ್ಲಿ ಒತ್ತಡ ಬರುತ್ತದೆ ಅದನ್ನು ಬಿಟ್ಟು ಯಾರು ಪಾಪದವರು ಇದ್ದಾನೆ ಅವನದ್ದನ್ನು ತೆಗೆದು ಹಾಕುವುದು ಮಾಡಬಾರದು, ಡಿಸ್ಕ್ರಿಮಿನೇಷನ್ ಇಲ್ಲದೆ ತೆಗೆಯಬೇಕಾಗುತ್ತದೆ.

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಆರನೇ ತಾರೀಖಿನ ದಿವಸ ಹೈಕೋರ್ಟ್‌ನಲ್ಲಿ ತೀರ್ಪು ಬರುತ್ತದೆ ಎಂದು ಹೇಳಿದ್ದಾರೆ. ಸಮಿತಿಯನ್ನೂ ಕೂಡ ಮಾಡಿದ್ದೇವೆಂದು ಹೇಳಿದ್ದಾರೆ. ಇದು ಒಂದು ರೀತಿಯ ದ್ವಂದ್ವ ಇದೆ. ಕೋರ್ಟ್ ನಿರ್ದೇಶನ ಇನ್ನೂ ಬಂದಿಲ್ಲ. ಬಾರದೆ ಇರತಕ್ಕಂತಹ ಸಂದರ್ಭದಲ್ಲಿ ಸಮಿತಿ ಏನು ತೀರ್ಮಾನ ತೆಗೆದುಕೊಳ್ಳುತ್ತದೆ?

ಶ್ರೀ ಧರ್ಮಸಿಂಗ್: ಮಾನ್ಯ ಸದಸ್ಯರು ಹೇಳಿದ ಹಾಗೆ, ನ್ಯಾಷನಲ್ ಹೈವೇಯಲ್ಲಿ ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಅಪಘಾತಗಳಾಗುತ್ತಿವೆ. ನಾವು ಎಲ್ಲಾ ರಸ್ತೆಗಳನ್ನೂ ಸಹ ಆಧುನೀಕರಣಗೊಳಿಸಬೇಕಾಗಿದೆ. ನ್ಯಾಷನಲ್ ಹೈವೇ ಅಥಾರಿಟಿ ಕೂಡ ಅದನ್ನು ಮಾಡುತ್ತಿದೆ. ಬೆಂಗಳೂರು-ಮೈಸೂರು ಮಾರ್ಗದಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತಿದೆ. ಮೈಸೂರು-ಬೆಂಗಳೂರು ಕಾರಿಡಾರ್ ಬಂದ ಮೇಲೆ ಅದು ಕಡಿಮೆಯಾಗಬಹುದು. ಮೈಸೂರು-ಬೆಂಗಳೂರಿಗೆ ೪ ಲೇನ್ ಮಾಡುತ್ತಿದ್ದು, ಅದೂ ಒಂದು ಅಂಶವಾಗಿದೆ. ಡೆಪ್ಯುಟಿ ಕಮಿಷನರ್‌ರಿಂದ ಐವಾನ್‌ಶಾಹಿಗೆ ಹೋಗುವ ರೀತಿಯಲ್ಲಿ ದೊಡ್ಡ ದೊಡ್ಡ ವ್ಯಕ್ತಿಗಳಿದ್ದಾರೆ. ನಮ್ಮ ಮನೆ ಹೋಗುತ್ತದೆ, ನಿಮ್ಮ ಮನೆ ಹೋಗುತ್ತದೆ ಎನ್ನುತ್ತಾರೆ. ಎಲ್ಲೆಲ್ಲಿ ಎನ್‌ಕ್ರೋಚ್‌ಮೆಂಟ್ ಮಾಡಿದ್ದಾರೆ, ಅದನ್ನು ಮಾಡಿ ಎಂದು ಹೇಳಿದ್ದೇನೆ. ಎನ್‌ಕ್ರೋಚ್‌ಮೆಂಟ್ ಬಗ್ಗೆ ಏನು ಎಕ್ಸ್‌ಟೆನ್‌ಷನ್ ಕೊಟ್ಟಿದ್ದರು, ಅದರ ಬಗ್ಗೆ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. Six months we have constituted an Internal Department Committee. ಅವರೂ ಕೂಡ ಹೋಗುತ್ತಾರೆ. ಎಷ್ಟು ಕಾಂಪನ್‌ಸೇಷನ್ ಕೊಡಬೇಕು, ಯಾವ ರೀತಿ ಹೋಗಬೇಕೆಂಬ ಬಗ್ಗೆ That is separate issue.

ಹುಣಸೂರು ತಾಲ್ಲೂಕು ಹನಗೋಡು ಗ್ರಾಮದ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರವನ್ನು ಮೇಲ್ದರ್ಜೆಗೇರಿಸುವುದು.

೩೧೭(೩೬೮೩)